ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 13.12.2023.**

**ಪಾಟೀ ಸವಾಲು - 3 ನೇ ಪ್ರತಿವಾದಿ ಪರ ವಕೀಲರಿಂದಃ**

4) ನಾನು ವಿಶ್ವನಾಥಪುರ ಸರ್ಕಾರಿ ಶಾಲೆಯಲ್ಲಿ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಾತನ ಹೆಸರು ನಾರಾಯಣಸ್ವಾಮಿ ಇರುತ್ತದೆ. ನನ್ನ ತಾತನಿಗೆ 5 ಜನ ಗಂಡು ಮಕ್ಕಳು ಒಬ್ಬ ಮಗಳು ಇರುತ್ತಾರೆ. ನನ್ನ ತಾತನ ಮಕ್ಕಳು ಹೆಸರುಗಳು ಸುಬ್ಬರಾಯಪ್ಪ, ಗೋವಿಂದಪ್ಪ, ರಾಮಚಂದ್ರಪ್ಪ, ಕೃಷ್ಣಮೂರ್ತಿ, ರಾಮಾಂಜಿನಪ್ಪ ಮತ್ತು ಜಯಲಕ್ಷ್ಮೀ. ನನ್ನ ತಂದೆ 1 ನೇ ಪ್ರತಿವಾದಿ ರಾಮಾಂಜಿನಪ್ಪ ಎಂದರೆ ಸರಿ. ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ಪಾಲು ವಿಭಾಗ ನಡೆದಿದೆಯೇ? ಎಂದರೆ ನಡೆದಿರುತ್ತದೆ. ಆ ಪಾಲು ವಿಭಾಗ 1990 ರಲ್ಲಿ ನಡೆದಿರುತ್ತದೆ. ಆ ವಿಭಾಗದಲ್ಲಿ ನನ್ನ ತಂದೆಯ ಹಿಸ್ಸೆಗೆ 2 ಎಕರೆ ಬಂದಿರುತ್ತದೆ. ಅದೇ ಈ ದಾವಾ ಜಮೀನು ಆಗಿರುತ್ತದೆ. ನನ್ನ ತಂದೆಗೆ ಇಬ್ಬರು ಮಕ್ಕಳಿದ್ದು, ಈಗ ನನ್ನ ತಮ್ಮ ಮೃತಪಟ್ಟಿದ್ದು, ನಾನು ಒಬ್ಬಳೇ ಮಗಳು ಇರುತ್ತೇನೆ. ನನ್ನ ತಮ್ಮ 5 ವರ್ಷ ವಯಸ್ಸು ಇದ್ದಾಗ ಮೃತಪಟ್ಟಿದ್ದ. ನನ್ನನ್ನು ಶಿಡ್ಲಘಟ್ಟಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ಶಿಡ್ಲಘಟ್ಟದಿಂದ ವಿಶ್ವನಾಥಪುರಕ್ಕೆ ಸುಮಾರು 30-35 ಕಿ.ಮೀ ಅಂತರವಿರುತ್ತದೆ. ನನ್ನ ಮದುವೆ 2020 ರಲ್ಲಿ ಆಗಿತ್ತು. ನನ್ನ ಮದುವೆಯಾದಾಗಿನಿಂದ ನಾನು ಗಂಡನ ಮನೆಯಲ್ಲೇ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ಈ ದಿನ ನಾನು ಕೋರ್ಟಿಗೆ ನನ್ನ ತಂದೆಯ ಜೊತೆಯಲ್ಲೇ ಬಂದಿದ್ದೇನೆ ಎಂದರೆ ಸರಿ. ನನ್ನ ತಂದೆ ವಿಶ್ವನಾಥಪುರದಿಂದ ನಾನು ಶಿಡ್ಲಘಟ್ಟದಿಂದ ದೇವನಹಳ್ಳಿಗೆ ಬಂದು ನಂತರ ಇಬ್ಬರೂ ಜೊತೆಯಲ್ಲಿ ಕೋರ್ಟಿಗೆ ಬಂದಿದ್ದೇವೆ. ನಾವು ಇಬ್ಬರೂ ಜೊತೆಯಲ್ಲಿ ವಕೀಲರ ಕಛೇರಿಗೆ ಹೋಗಿ ನಂತರ ಕೋರ್ಟಿಗೆ ಬಂದಿದ್ದೇವೆ ಎಂದರೆ ಇಲ್ಲ, ನೇರವಾಗಿ ಕೋರ್ಟಿಗೇ ಬಂದಿದ್ದೇವೆ.

5) ನಾನು ಮತ್ತು ನನ್ನ ತಂದೆ 1 ನೇ ಪ್ರತಿವಾದಿ ಅನ್ಯೋನ್ಯತೆಯಿಂದ ಇದ್ದೇವೆ ಎಂದರೆ ಜಮೀನಿನ ವಿಚಾರದಲ್ಲಿ ಮಾತ್ರ ನನಗೂ ಮತ್ತು ನನ್ನ ತಂದೆಗೂ

ಅನ್ಯೋನ್ಯತೆ ಇರುವುದಿಲ್ಲ. ನಾನು ನನ್ನ ತಂದೆಗೆ ಒಬ್ಬಳೇ ಮಗಳು ಆಗಿರುವ ಕಾರಣ ಅವರಿಗೆ ನನ್ನ ಮೇಲೆ ಪ್ರೀತಿ ಇದೆ ಎಂದರೆ ಸರಿ. ನನ್ನ ತಂದೆ ಈಗ ಏನೂ ಕೆಲಸ ಮಾಡುವುದಿಲ್ಲ. ನಾನು ಹುಟ್ಟಿದಾಗಿನಿಂದಲೂ ನನ್ನ ತಂದೆಯೇ ನನ್ನ ವಿದ್ಯಾಭ್ಯಾಸದ ಖರ್ಚುಗಳನ್ನು ಮತ್ತು ಪೋಷಣೆಯನ್ನು ಮಾಡಿರುತ್ತಾರೆ ಎಂದರೆ ಇಲ್ಲ, ನನ್ನ ತಾಯಿಯ ತಾಯಿ ಮಾಡಿದ್ದಾರೆ. ನನ್ನ ತಾಯಿಯ ತಾಯಿಯದು ಹನಿಯೂರು ಆಗಿರುತ್ತದೆ. ಆಕೆ ಇನ್ನೂ ಜೀವಂತವಾಗಿದ್ದಾರೆ. ಈ ದಾವೆ ಹಾಕಲು ಯಾರು ಮಾಹಿತಿ ಕೊಟ್ಟರು ಎಂದರೆ ನಾನೇ ಕೊಟ್ಟಿದ್ದೇನೆ.

6) ನಾನು ದಿನಾಂಕಃ 23.03.1994 ರಂದು ಜನಿಸಿದ್ದೇನೆ. ನನ್ನ ತಂದೆ 1 ನೇ ಪ್ರತಿವಾದಿಯು ದಿನಾಂಕಃ 29.11.1995 ರಂದು ದಾವಾ ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಪಿ-4 ಅದೇ ಕ್ರಯಪತ್ರದ ದೃಢೀಕೃತ ಪ್ರತಿಯೆಂದರೆ ಸರಿ. ನಿಪಿ-4 ಕ್ರಯಪತ್ರದ ಆಧಾರದ ಮೇಲೆ 2 ನೇ ಪ್ರತಿವಾದಿಯು ದಾವಾ ಸ್ವತ್ತಿನ ಖಾತೆಯನ್ನು ನಿಪಿ-3 ರಂತೆ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯು ದಿನಾಂಕಃ 29.11.1995 ರ ಕ್ರಯಪತ್ರದ ಪ್ರಕಾರ ಇಸವಿ 2007 ರವರೆಗೆ ದಾವಾ ಸ್ವತ್ತಿನ ಸ್ವಾಧೀನ ಹೊಂದಿದ್ದರು ಎಂದರೆ ಸರಿ. ಇಸವಿ 2007 ರವರೆಗೂ ದಾವಾ ಸ್ವತ್ತಿನ ಖಾತೆ ಮತ್ತು ಪಹಣಿಗಳು 2 ನೇ ಪ್ರತಿವಾದಿಯ ಹೆಸರಿನಲ್ಲೇ ನಮೂದಾಗುತ್ತಿದ್ದವು ಎಂದರೆ ಸರಿ. 2 ನೇ ಪ್ರತಿವಾದಿಯು ದಿನಾಂಕಃ 19.07.2007 ರಂದು ದಾವಾ ಸ್ವತ್ತನ್ನು 3 ನೇ ಪ್ರತಿವಾದಿ ಶ್ರೀಮತಿ. ಜಯಲಕ್ಷ್ಮೀಯವರಿಗೆ ಕ್ರಯ ಮಾಡಿದ್ದಾರೆ ಎಂದರೆ ಸರಿ. ಆ ಕ್ರಯಪತ್ರವೇ ನಿಪಿ-7 ಎಂದರೆ ಸರಿ. ನಿಪಿ-7 ರ ಕ್ರಯಪತ್ರದಂತೆ 3 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಸರಿ ಎಂದಿದ್ದು, ನಿಪಿ-1 ರಿಂದ ನಿಪಿ-8 ದಾಖಲೆಗಳ ಜೊತೆ ಇರುವ ಸದರಿ **ಮ್ಯೂಟೇಶನ ರಿಜಿಸ್ಟರ್ ನ್ನು ನಿಪಿ-9 ಎಂದು ಗುರುತಿಸಿತು.** ನಿಪಿ-9 ರ ದಾಖಲೆಯು 3 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ತನ್ನ ಹೆಸರಿಗೆ ಖಾತೆ

ಮಾಡಿಸಿಕೊಂಡಿರುವ ದಾಖಲೆ ಎಂದರೆ ಸರಿ. ನಿಪಿ-9 ರ ಆಧಾರದ ಮೇಲೆ 3 ನೇ ಪ್ರತಿವಾದಿಯ ಹೆಸರಿಗೆ ನಿಪಿ-8 ರಂತೆ ಪಹಣಿ ನಮೂದಾಗಿದೆ ಎಂದರೆ ಸರಿ. 3 ನೇ ಪ್ರತಿವಾದಿ ತಾನು ದಾವಾ ಸ್ವತ್ತನ್ನು ಕ್ರಯ ಮಾಡಿದ ದಿನಾಂಕದಿಂದ ಈ ದಿನಾಂಕದವರೆಗೂ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿ. ನಾನು ಹೇಳುತ್ತೇನೆ, 3 ನೇ ಪ್ರತಿವಾದಿ ಖರೀದಿ ಮಾಡಿದ್ದರೂ ಸಹ 2014 ರವರೆಗೆ ದಾವಾ ಸ್ವತ್ತನ್ನು ಸಾಗುವಳಿ ಮಾಡಲು ನಮಗೇ ಬಿಟ್ಟಿದ್ದರು, ದಾವೆ ಹಾಕಿದ ವಿಚಾರ ಗೊತ್ತಾದ ನಂತರ ದಾವಾ ಸ್ವತ್ತನ್ನು ನಾವು ಸಾಗುವಳಿ ಮಾಡುವುದನ್ನು ಅವರು ನಿಲ್ಲಿಸಿದರು. ನಾನು ಹೇಳುತ್ತಿರುವ ಪ್ರಕಾರ ದಾವಾ ಸ್ವತ್ತಿನ ಸಾಗುವಳಿಯನ್ನು ನನ್ನ ತಂದೆಯೇ ಮಾಡುತ್ತಿದ್ದರು. 1995 ರಲ್ಲಿ 2 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ನಂತರ ನನ್ನ ತಂದೆಯಾಗಲೀ, ನಾನಾಗಲೀ ಯಾವತ್ತೂ ದಾವಾ ಸ್ವತ್ತಿನ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

7) ಈ ದಾವೆ ಹಾಕುವಾಗ ನನ್ನ ವಯಸ್ಸನ್ನು 21 ವರ್ಷವೆಂದು ವಾದ ಪತ್ರದ ಶೀರ್ಷಿಕೆಯಲ್ಲಿ ನಮೂದಿಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ದಿನಾಂಕದಂದು ನಾನು ಇನ್ನೂ ಹುಟ್ಟೇ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿರುವ ವಿಚಾರ ನನಗೆ ಯಾವಾಗ ಗೊತ್ತಾಯಿತು ಎಂದರೆ 2014 ರಲ್ಲಿ ಗೊತ್ತಾಯಿತು. ಅದಕ್ಕಿಂತ ಮುಂಚೆ ಮಾರಾಟವಾದ ವಿಚಾರ ನನಗೆ ಗೊತ್ತಿರಲಿಲ್ಲವೇ? ಎಂದರೆ ಇಲ್ಲ. 2 ನೇ ಪ್ರತಿವಾದಿ 2007 ರಲ್ಲಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಗ್ಗೆ ಯಾವಾಗ ಗೊತ್ತಾಯಿತು ಎಂದರೆ ಇಬ್ಬರೂ ಪ್ರತಿವಾದಿಗಳಿಗೂ ಮಾರಾಟವಾದ ಬಗ್ಗೆ ನನಗೆ 2014 ರಲ್ಲೇ ಗೊತ್ತಾಯಿತು. ನನ್ನ ತಂದೆಗೆ ಕುಟುಂಬ ಸದಸ್ಯರನ್ನು ಪೋಷಣೆ ಮಾಡಲು ಆರ್ಥಿಕವಾಗಿ ತೊಂದರೆ ಇತ್ತು ಎಂದರೆ ಸರಿ. ನಾನು ಹೇಳುತ್ತೇನೆ ನನ್ನ ಅಜ್ಜಿ ಅಂದರೆ ತಾಯಿಯ ತಾಯಿ ನಮ್ಮನ್ನು ಪೋಷಣೆ ಮಾಡುತ್ತಿದ್ದರು. ನನ್ನ ಅಜ್ಜಿಯ ಊರು ಮತ್ತು ವಿಶ್ವನಾಥಪುರದ ನಡುವೆ ಸುಮಾರು 40 ಕಿ.ಮೀ. ದೂರವಿದೆ ಎಂದರೆ 25-30

ಕಿ.ಮೀ. ದೂರಿವಿರುತ್ತದೆ. ನನ್ನ ತಾಯಿಯ ತಾಯಿಗೆ ಮಕ್ಕಳು ಇದ್ದಾರೆ ಎಂದರೆ ಇಬ್ಬರು ಮಕ್ಕಳು ಇರುತ್ತಾರೆ. ಆಕೆಯನ್ನು ತನ್ನ ಸ್ವಂತ ಮಕ್ಕಳೇ ಪೋಷಣೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿಯ ತಾಯಿ ಆಕೆಯೇ ಬೇರೆಯವರ ಮೇಲೆ ಅವಲಂಬಿತಳಾಗಿದ್ದರೂ ಈ ದಾವೆಗೋಸ್ಕರ ನಮ್ಮ ಕುಟುಂಬವನ್ನು ಆಕೆ ಪೋಷಣೆ ಮಾಡುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕವನ್ನು ದೃಢಪಡಿಸುವ ಜನನ ಪ್ರಮಾಣ ಪತ್ರವನ್ನು ತಂದು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಬೆಲೆ ಹೆಚ್ಚಳವಾಗಿರುವ ಕಾರಣ ನಾನು ಮತ್ತು ನನ್ನ ತಂದೆ ಶಾಮೀಲಾಗಿ 3 ನೇ ಪ್ರತಿವಾದಿಯಿಂದ ಹೆಚ್ಚುವರಿ ಹಣ ವಸೂಲು ಮಾಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - 2 ನೇ ಪ್ರತಿವಾದಿ ಪರ ವಕೀಲರಿಂದಃ**

8) ಸರ್ವೆ ನಂ.5 ಸರ್ಕಾರಿ ಗೋಮಾಳವೆಂದರೆ ಸರಿ. ಆ ಜಮೀನು ನನ್ನ ತಾತನಿಗೆ ಮಂಜೂರಾತಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಆತನ ಸಹೋದರರು ನಿಪಿ-2 ರಂತೆ ಪಾಲು ವಿಭಾಗ ಮಾಡಿಕೊಂಡಾಗ ನನ್ನ ತಾತನ ಹೆಸರಿನಲ್ಲಿದ್ದ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದಾಗಿ ನಮೂದಾಗಿದೆ ಎಂದರೆ ಸರಿ. ನನ್ನ ತಾತನಿಗೆ ದಾವಾ ಸ್ವತ್ತು ಅಲ್ಲದೇ ಬೇರೆ ಆಸ್ತಿಗಳು ಕೂಡ ಇದ್ದವೇ? ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಬೇರೆ ಆಸ್ತಿಗಳು ಕೂಡ ಇದ್ದಿದ್ದರೇ ಅವುಗಳನ್ನೂ ಕೂಡ ನನ್ನ ತಂದೆ ಮತ್ತು ಆತನ ಸಹೋದರರು ಪಾಲು ವಿಭಾಗ ಮಾಡಿಕೊಂಡಿರುತ್ತಿದ್ದರು ಎಂದರೆ ಸರಿ. ಆದ್ದರಿಂದ ನನ್ನ ತಾತನಿಗೆ ದಾವಾ ಸ್ವತ್ತು ಒಂದೇ ಆಸ್ತಿ ಇತ್ತು ಎಂದರೆ ಸರಿ. ಆ ಒಂದು ಆಸ್ತಿಯನ್ನು ನನ್ನ ತಂದೆ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡರು ಎಂದರೆ ಸರಿ. ದಾವಾ ಹಾಕುವಾಗ ನನಗೆ 21 ವರ್ಷ ವಯಸ್ಸು ಇತ್ತು ಎಂಬ ರುಜುವಾತಿಗೆ ನಾನು ಯಾವುದೇ ದಾಖಲೆಯನ್ನು

ಹಾಜರು ಮಾಡಿಲ್ಲ ಎಂದರೆ ಸರಿ. ನನ್ನ ತಾತನ ಸ್ವಯಾರ್ಜಿತ ಆಸ್ತಿಯನ್ನು ನನ್ನ ತಾತನ ಮರಣಾನಂತರ ನನ್ನ ತಂದೆ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡರು ಎಂದರೆ ನನ್ನ ತಾತ ಬದುಕಿದ್ದಾಗಲೇ ವಿಭಾಗ ಮಾಡಿಕೊಂಡಿದ್ದರು. ನಾನು ಸದರಿ ವಿಭಾಗ ಪತ್ರವನ್ನು ನೋಡಿದ್ದೀನಾ? ಎಂದರೆ ನೋಡಿದ್ದೇನೆ. ಸದರಿ ವಿಭಾಗ ಪತ್ರವನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಆ ವಿಭಾಗ ಪತ್ರ ಯಾರ ಬಳಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ವಿಭಾಗ ಪತ್ರವನ್ನು ಎಲ್ಲಿ ನೋಡಿದ್ದೆ ಎಂದರೆ ಪಂಚಾಯತಿ ಕಛೇರಿಯಲ್ಲಿ ನೋಡಿದ್ದೆ. ದಾವೆ ಹಾಕುವಾಗ ನನ್ನ ವಯಸ್ಸು 21 ವರ್ಷವೆಂದು ಹೇಳಿದ್ದೇನೆ ಎಂದರೆ ಸರಿ. ಆದ್ದರಿಂದ ಒಬ್ಬ ವ್ಯಕ್ತಿ ತನಗೆ 21 ವರ್ಷ ತುಂಬಿದ ನಂತರವೇ ತನ್ನ ವಯಸ್ಸನ್ನು 21 ವರ್ಷವೆಂದು ಹೇಳುತ್ತಾನೆ ಎಂದರೆ ಸರಿ. ನಾನು 21 ವರ್ಷ ತುಂಬಿದ ನಂತರವೇ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಜನಿಸಿದ ನಂತರ 10 ನೇ ತರಗತಿ ಓದುವವರೆಗೂ ನನ್ನ ತಂದೆಯ ಮನೆಯಲ್ಲೇ ವಾಸ ಮಾಡುತ್ತಿದ್ದೆ ಎಂದರೆ ಸರಿ. ವಾದ ಪತ್ರದಲ್ಲಿ ಕೂಡ ನಾನು 2015 ರಲ್ಲೂ ವಿಶ್ವನಾಥಪುರದಲ್ಲೇ ವಾಸ ಮಾಡುತ್ತಿರುವುದಾಗಿ ವಿಳಾಸ ನಮೂದು ಮಾಡಿದ್ದೇನೆ ಎಂದರೆ ಸರಿ. ನಾನು 10 ನೇ ತರಗತಿ ಮುಗಿಸಿದ ನಂತರದಿಂದ 2015 ನೇ ಇಸವಿವರೆಗೂ ನನ್ನ ತಂದೆಯ ಮನೆಯಲ್ಲೇ ವಾಸ ಮಾಡುತ್ತಿದ್ದೆ ಎಂದರೆ ಸರಿ. 2015 ರಿಂದ ನನಗೆ ಮದುವೆಯಾದ 2020 ರವರೆಗೂ ನಾನು ನನ್ನ ತಂದೆಯ ಮನೆಯಲ್ಲೇ ವಾಸ ಮಾಡುತ್ತಿದ್ದೆ ಎಂದರೆ ಸರಿ. ನಮ್ಮ ಮನೆಯಲ್ಲಿ ನಾನು, ನನ್ನ ತಂದೆ ಮತ್ತು ತಾಯಿ ಮೂರೇ ಜನ ವಾಸ ಮಾಡುತ್ತೇವೆ ಎಂದರೆ ಸರಿ. ನನ್ನ ಮದುವೆಯನ್ನು ನನ್ನ ಗಂಡನ ಮನೆಯಲ್ಲಿ ನೆರವೇರಿಸಿದ್ದರು. ನನ್ನ ಮದುವೆಯನ್ನು ಗಂಡನ ಮನೆಯಲ್ಲಿ ನೆರವೇರಿಸಿದ್ದರು ಎಂಬ ರುಜುವಾತಿಗೆ ನಾನು ದಾಖಲೆಗಳನ್ನು ಹಾಜರು ಮಾಡಿದ್ದುಂಟೇ? ಎಂದರೆ ಮಾಡಿಲ್ಲ. ದಾವೆ ಹಾಕಿದ ನಂತರ ನನ್ನ ಮದುವೆಯನ್ನು ಗಂಡನ ಮನೆಯವರೇ ಮಾಡಿಕೊಂಡಿದ್ದರು ಎಂಬ ಬಗ್ಗೆ ವಾದ ಪತ್ರದ ತಿದ್ದುಪಡಿ ಏನೂ ಮಾಡಿಲ್ಲ ಎಂದರೆ ಸರಿ. ನನ್ನ ಚಿಕ್ಕಂದಿನಿಂದ ವಿದ್ಯಾಭ್ಯಾಸ ಮಾಡಿಸಿ ಮದುವೆ ಮಾಡುವವರೆಗೂ ಎಲ್ಲಾ

ಖರ್ಚುಗಳನ್ನು ನನ್ನ ತಂದೆಯೇ ವಹಿಸಿಕೊಂಡು ನನಗೆ ಮದುವೆ ಮಾಡಿಕೊಟ್ಟು ಕಳುಹಿಸಿದರು ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಗೆ ನಿರುಪಾಧಿಕವಾದ ಆಸ್ತಿಯಾಗಿದ್ದ ಕಾರಣ ಅವರು ಅದನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಹೌದು, ನಾನು ಹೇಳುತ್ತೇನೆ ನಾನು ಕೂಡ ಅವರ ಮಗಳು ಆಗಿದ್ದೇನೆ. ನನ್ನ ವಾದ ಪತ್ರದ 3 ನೇ ಪ್ಯಾರಾದಲ್ಲಿ ನನ್ನ ತಾತನ ಆಸ್ತಿಯನ್ನು ಆತನ ಮರಣಾನಂತರ ನನ್ನ ತಂದೆ ಮತ್ತು ತಂದೆಯ ಸಹೋದರರು ವಿಭಾಗ ಮಾಡಿಕೊಂಡರು ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಆದ್ದರಿಂದ ದಾವಾ ಸ್ವತ್ತು ನನ್ನ ತಂದೆಗೆ ನಿರುಪಾಧಿಕವಾಗಿ ಬಂದಿದ್ದ ಆಸ್ತಿಯಾಗಿದ್ದ ಕಾರಣ ಅವರು ಅದನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ನಾನು ಒಪ್ಪುವುದಿಲ್ಲ. ನನ್ನ ತಂದೆಗೆ ದಾವಾ ಸ್ವತ್ತು ನಿರುಪಾಧಿಕವಾದ ಆಸ್ತಿಯಾಗಿದ್ದ ಕಾರಣ ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಹಾಕುವ ಸಮಯಕ್ಕೆ ನನಗೆ ಆಗಲೇ 21 ವರ್ಷ ತುಂಬಿದ್ದ ಕಾರಣ ನನ್ನ ಜನ್ಮ ದಿನಾಂಕವನ್ನು ದೃಢಪಡಿಸುವ ಯಾವುದೇ ದಾಖಲೆಗಳನ್ನು ನಾನು ಹಾಜರು ಮಾಡಿಲ್ಲ ಎಂದರೆ ಮುಂದೆ ಹಾಜರು ಮಾಡುತ್ತೇನೆ. ನನ್ನ ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರಗಳಲ್ಲಿ ನನ್ನನ್ನು ನನ್ನ ಅಜ್ಜಿ ಅಂದರೆ ನನ್ನ ತಾಯಿಯ ತಾಯಿ ಪೋಷಣೆ ಮಾಡುತ್ತಿದ್ದರೆಂದು ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸರಿ. 1995 ರಲ್ಲಿ 2 ನೇ ಪ್ರತಿವಾದಿಗೆ ಮಾರಾಟವಾದಾಗಿನಿಂದ ನಾನಾಗಲೀ ನನ್ನ ತಂದೆಯಾಗಲೀ ಯಾವತ್ತೂ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಇದ್ದೆವು. ನಾನು ಹೇಳುವಂತೆ ನಾವು 1995 ರ ನಂತರವೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಿದ್ದು ನಿಜವಾಗಿದ್ದಲ್ಲಿ ನಿಪಿ-6 ರ ಕಾಲಂ 12 ರಲ್ಲಿ ನಮ್ಮ ಹೆಸರುಗಳು ನಮೂದಾಗಿರುತ್ತಿದ್ದವು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ 1995 ರ ನಂತರ ಯಾವತ್ತೂ ಸ್ವಾಧೀನದಲ್ಲಿ ಇರಲಿಲ್ಲವಾದ್ದರಿಂದ ಪಹಣಿಯ ಕಾಲಂ 12 ರಲ್ಲಿ ನಮ್ಮ ಹೆಸರುಗಳು ನಮೂದಾಗಿಲ್ಲ ಎಂದರೆ ಸರಿ. 2007 ರ ನಂತರ 2 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ಮಾರಾಟ ಮಾಡಿ

ದಾವಾ ಸ್ವತ್ತಿನ ಸ್ವಾಧೀನವನ್ನು 3 ನೇ ಪ್ರತಿವಾದಿಗೆ ಕೊಟ್ಟರು ಎಂದರೆ ಸರಿ. ಅದಾದ ನಂತರ ಪಹಣಿಯಲ್ಲಿ 3 ನೇ ಪ್ರತಿವಾದಿಯ ಹೆಸರು ನಮೂದಾಯಿತು ಎಂದರೆ ಸರಿ.

9) ನನ್ನ ತಂದೆ ಮತ್ತು ತಾಯಿ ಈಗಲೂ ವಿಶ್ವನಾಥಪುರದಲ್ಲಿ ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ನನ್ನ ತಂದೆಯ ಮನೆಗೆ ಯಾವಾಗಲೂ ಬಂದು-ಹೋಗುವುದನ್ನು ಮಾಡುತ್ತಿದ್ದೇನೆ ಎಂದರೆ ಸರಿ. ನನಗೆ ಒಬ್ಬ ಮಗ ಇರುತ್ತಾನೆ. ಅವನು ಶಿಡ್ಲಘಟ್ಟದಲ್ಲಿ ಜನಿಸಿದ್ದ. ನನ್ನ ಬಾಣಂತನವನ್ನು ನನ್ನ ತಂದೆ-ತಾಯಿಯೇ ಮಾಡಿದ್ದರು ಎಂದರೆ ಸರಿ. ನನ್ನ ತಂದೆ-ತಾಯಿ ವಾಸ ಮಾಡುವ ಸ್ವಂತ ಮನೆಯನ್ನು ಈ ದಾವೆಗೆ ಸೇರಿಸಿಲ್ಲ ಎಂದರೆ ಅದರ ಸೈಟನ್ನು ನನ್ನ ಅಜ್ಜಿ ಕೊಡಿಸಿದ್ದರು, ಮನೆ ಕಟ್ಟಲು ನನ್ನ ಅಜ್ಜಿಯೇ ಹಣ ಕೊಟ್ಟಿದ್ದರು. ಈ ದಾವೆ ಹಾಕಿದ ನಂತರ ನಾನು, ನನ್ನ ತಂದೆ ಮತ್ತು ನನ್ನ ಗಂಡ ಎಲ್ಲರೂ ದಾವೆಯನ್ನು ಯಾವ ರೀತಿ ನಡೆಸಬೇಕು ಎಂಬ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ನಿಪಿ-2 ಮತ್ತು ನಿಪಿ-3 ದಾಖಲೆಗಳನ್ನು ಪಂಚಾಯತಿ ಕಛೇರಿಯಿಂದ ಪಡೆದುಕೊಂಡಿದ್ದೇನೆ. ಅವುಗಳನ್ನು ಪಡೆದುಕೊಳ್ಳಲು ಪಂಚಾಯತಿ ಕಛೇರಿಗೆ ನಾನೇ ಹೋಗಿದ್ದೆ. ನಿಪಿ-2 ಮತ್ತು ನಿಪಿ-3 ದೃಢೀಕೃತ ಪ್ರತಿಗಳಲ್ಲಿ ಅವುಗಳನ್ನು ಪಡೆಯಲು ಅರ್ಜಿ ಕೊಟ್ಟ ಬಗ್ಗೆ ನನ್ನ ಹೆಸರು ನಮೂದಾಗಿದೆಯೇ? ಎಂದರೆ ಆಗಿಲ್ಲ. 2 ಮತ್ತು 3 ನೇ ಪ್ರತಿವಾದಿಗಳ ದೃಢೀಕೃತ ಕ್ರಯಪತ್ರಗಳಾದ ನಿಪಿ-4 ಮತ್ತು ನಿಪಿ-7 ನ್ನು ಪಡೆಯಲು ಯಾರು ಅರ್ಜಿ ಸಲ್ಲಿಸಿದ್ದರು ಎಂದರೆ ನಾನೇ ಸಲ್ಲಿಸಿದ್ದೆ. ಈ ದಾಖಲೆಗಳನ್ನು ಪಡೆಯಲು ನಾನು ಯಾವತ್ತೂ ಅರ್ಜಿ ಸಲ್ಲಿಸಿರಲಿಲ್ಲ, ಅವುಗಳನ್ನು ಬೇರೆಯವರ ಮೂಲಕ ನನ್ನ ತಂದೆಯೇ ನನಗೆ ಒದಗಿಸಿ ಕೊಟ್ಟಿದ್ದಾರೆ ಎಂದರೆ ನಾನು ಒಪ್ಪುವುದಿಲ್ಲ. ಆನಂದ ಎಂದರೆ ಯಾರು ಎಂದರೆ ನನ್ನ ಸೋದರ ಮಾವ ಅಂದರೆ ನನ್ನ ತಾಯಿಯ ತಮ್ಮ. ಪ್ರಕಾಶ ಯಾರು ಎಂದರೆ ನನಗೆ ಗೊತ್ತಿಲ್ಲ. ನಿಪಿ-7 ನ್ನು ಪಡೆಯಲು ಅರ್ಜಿ ಸಲ್ಲಿಸಿರುವ ಪ್ರಕಾಶ ಯಾರು ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ಕೈ ಬರಹ ಪಹಣಿಯನ್ನು ಪಡೆಯಲು ನಾನೇ ಅರ್ಜಿ ಸಲ್ಲಿಸಿದ್ದೆ. ನಿಪಿ-5 ರಲ್ಲಿ ನಾನು ಅರ್ಜಿ

ಕೊಟ್ಟ ಬಗ್ಗೆ ನಮೂದಾಗಿಲ್ಲವೆಂದರೆ ಸರಿ. ಆದ್ದರಿಂದ ನನ್ನ ತಂದೆ ಮತ್ತು ಇತರೆ ಕುಟುಂಬ ಸದಸ್ಯರು ದಾವಾ ಸ್ವತ್ತಿನ ಬೆಲೆ ಹೆಚ್ಚಳವಾದ ಕಾರಣ ಬೇರೆಯವರ ಮೂಲಕ ನನಗೆ ದಾಖಲೆಗಳನ್ನು ಒದಗಿಸಿ ಕೊಟ್ಟು ನನ್ನ ಮೂಲಕ ದಾವೆ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ವಿಧವಾದ ಹಕ್ಕು ಬಾದ್ಯತೆಗಳು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**